<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

**ಸಿಸಿ ನಂ.70/2025**

ಚಾಸಾ-4 ಫ್ರಾಸಾ-6

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 23-02-2026

| | | |
|---|---|---|
| ಹೆಸರು | : | ರಮೇಶ |
| ತಂದೆಯ ಹೆಸರು | : | ಸಾತಲಿಂಗಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಹಿರಿಯ ವ್ಯವಸ್ಥಾಪಕರು ರೇಣುಕಾ ಶುಗರ್ಸ |
| ವಾಸಸ್ಥಳ | : | ಗೋಕಾಕ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

2011 ರಿಂದ 2022 ರ ವರೆಗೆ ರೇಣುಕಾ ಶುಗರ್ಸ ಹವಳಗಾದಲ್ಲಿ ವ್ಯವಸ್ಥಾಪಕಾನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 21.01.2013 ರಂದು ಭಾಗ್ಯವಂತಿ ಪೆಟ್ರೋಲ್ ಪಂಪ ಬಂಕಲಗಿ, ಮಹಾಂತೇಶ ಪೆಟ್ರೋಲ್ ಏಜೆನ್ಸಿ ಅಫಜಲಪೂರ, ಮಲ್ಲಿಕಾರ್ಜುನ ಪೆಟ್ರೋಲ್ ಏಜೆನ್ಸಿ ಬಗಲೂರ ಮತ್ತು ಶ್ಯಾಸ್ತ್ರಿ ಪೆಟ್ರೋಲ್ ಏಜೆನ್ಸಿ ಗಾಣಗಾಪುರ ಇವುಗಳೊಂದಿಗೆ ನಮ್ಮ ಖಾರ್ಕಾನೆಯ ಒಪ್ಪಂದ ಮಾಡಿಕೊಂಡಿರುತ್ತದೆ. ಡಿಸೇಲ್ ಸಂಬಂದಿಸಿದಂತೆ ನನಗೆ ಚಾಸಾ-5 ಮತ್ತು 5 ನೇ ಆರೋಪಿಗೆ ಸಹಿ ಮಾಡುವ ಅಧಿಕಾರ ಹೊಂದಿದ್ದೇವು. ನಾವು ಡಿಸೇಲ್ ಇಂಡೆಂಟಗಳಿಗೆ ಸಹಿ ಮಾಡಿದ ನಂತರ ಅವುಗಳನ್ನು ಕಂಪ್ಯೂಟರ್ ಆಪರೇಟರಗಳು ಸ್ಲಿಪ್ ಜನರೇಟ್ ಮಾಡಿ ಈ ವಾಹನಗಳಿಗೆ ನೀಡುತ್ತಿದ್ದರು.

ದಿಃ 23.02.2013 ರಂದು 5 ನೇ ಆರೋಪಿಯು ನನಗೆ ದೂರವಾಣಿ ಕರೆ ಮಾಡಿ 360 ಲೀಟರ್ ಡಿಸೇಲ ಸಂಬಂದಿಸಿದಂತೆ ತಮ್ಮ ಸಹಿ ನಕಲು ಮಾಡಲಾಗಿದೆ ಎಂದು ತಿಳಿಸಿರುತ್ತಾರೆ. ಆರೋಪಿತರು ನನ್ನ ಡಿಸೇಲ ಇಂಡೆಂಟ ಸ್ಲಿಪಗಳನ್ನು ಕಳ್ಳತನ ಮಾಡಿ ಅವುಗಳ ಮೇಲೆ ನನ್ನ ನಕಲು ಸಹಿ

ಮಾಡಿರುತ್ತಾರೆ. ನಂತರ ತನಿಖೆ ಮಾಡಿದಾಗ ಬಗಲೂರ ಪೆಟ್ರೋಲ್ ಪಂಪನಲ್ಲಿ 490 ಲೀಟರಗಳು ಮಹಾಂತೇಶ ಪೆಟ್ರೋಲ್ ಏಜೆನ್ಸಿಯಲ್ಲಿ 1705 ಲೀಟರಗಳು ಮತ್ತು ಮಲ್ಲಿಕಾರ್ಜುನ ಪೆಟ್ರೋಲ್ ಏಜೆನ್ಸಿಯಲ್ಲಿ 90 ಲೀಟರಗಳಷ್ಟು ಡಿಸೇಲನ್ನು ನನ್ನ ನಕಲಿ ಸಹಿ ಮಾಡಿ ಪಡೆದಿರುತ್ತಾರೆ. ಆ ನಂತರ ತನಿಖೆ ಕಾಲಕ್ಕೆ ನನ್ನ ಮಾದರಿ ಸಹಿಗಳನ್ನು ಪಡೆದಿರುತ್ತಾರೆ. ನಾನು ಸಹಿ ಮಾಡಿದ ದಾಖಲೆಗಳನ್ನು ಸಾಕ್ಷ್ಯವಾಗಿ ಪಡೆದಿರುತ್ತಾರೆ. ಆ ನಂತರ ಆರೋಪಿತರು ನನ್ನ ಸಹಿಯನ್ನ ನಕಲು ಮಾಡಿ ಮೇಲೆ ಹೇಳಿದ ಡಿಸೇಲನ್ನು ಪಡೆದಿರುವುದು ಗೊತ್ತಾಗಿರುತ್ತದೆ. ಸಾಕ್ಷಿಗೆ ಖರಾರು ಪತ್ರವನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.5 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುತುತಿಸಲಾಯಿತು. ಸಾಕ್ಷಿಯ ಮಾದರಿ ಸಹಿಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ.6 ಎಂದು ಗುರುತಿಸಲಾಯಿತು. ಸಾಕ್ಷಿ ಅವುಗಳಲ್ಲಿರುವ R.1 ರಿಂದ 12 ವರೆಗಿನ ಸಹಿಗಳು ತಮ್ಮದೇ ಎಂದು ನುಡಿಯತ್ತಾರೆ.

ಪಾಟೀ ಸವಾಲುಃ **2** ನೇ ಆರೋಪಿತರ ಪರ ಶ್ರೀ **DK** ವಕೀಲರಿಂದಃ-

ನಾನು ಚಾಸಾ-1 ರವರ ಜೊತೆ ದೂರು ನೀಡಲು ಪೋಲಿಸ ಠಾಣೆಗೆ ಹೋಗಿದ್ದೆ. ಇಂಡೆಂಟ ಸ್ಲಿಪಗಳು ಯಾವ ದಿನಾಂಕದಂದು ಕಳ್ಳತನವಾಗಿದೆ ಎಂದು ನಿಖರವಾಗಿ ನಿನಾಂಕ ಹೇಳಲು ಬರುವುದಿಲ್ಲ. ಪೆಟ್ರೋಲ ಏಜೆನ್ಸಿ ಮತ್ತು ನಮ್ಮ ಖಾರ್ಕಾನೆಗಳ ನಡುವೆ ಒಪ್ಪಂದಗಳು ಇರುತ್ತವೆ. ಸದರಿ ಕರಾರು ಒಪ್ಪಂದಗಳನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಈ ಪ್ರಕರಣದ ಕುರಿತು ನನ್ನ ಮೇಲಾಧಿಕಾರಿಗಳಿಗೆ ಇ-ಮೇಲ ಹಾಗೂ ಮೌಖಿಕವಾಗಿ ತೀಳಿಸಿರುತ್ತೇನೆ. ಇ-ಮೇಲ ಪ್ರತಿಯನ್ನು ತನಿಖಾಧಿಕಾರಿಗೆ ಕೊಟ್ಟಿದಿನೋ ಇಲ್ಲವೋ ನೆನಪಿಲ್ಲ. ಇ-ಮೇಲ ಮುಖಾಂತರ ಯಾವ ದಿನಾಂಕದಂದು ಹೇಳಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪ್ರಕರಣ ನನ್ನ ಗಮನಕ್ಕೆ ಬಂದ ನಂತರ ತಿಳಿಸಿರುತ್ತೇನೆ. ಡಿಸೇಲ ಯಾವ ವಾಹನಕ್ಕೆ ಎಷ್ಟು ನೀಡಲಾಗಿದೆ ಎಂಬುದು ಪ್ರತಿದಿನ ನನಗೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಆರೋಪಿತನನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೆಟ್ರೋಲ ಏಜೆನ್ಸಿಗಳಿಗೆ ಹೋಗಿ ಸಿಸಿ ಕ್ಯಾಮೆರಾ ಪರಿಶೀಲನೆ ಮಾಡಿಲ್ಲ. ಆರೋಪಿತನಿಗೆ ಕಂಪ್ಯೂಟರ್ ಗೊತ್ತಿಲ್ಲ ಎಂದರೆ ಸರಿಯಲ್ಲ. ಇಂಡೆಂಟ ಸ್ಲಿಪಗಳ ಕ್ರಮ ಸಂಖ್ಯೆ ಹೇಸಲು ಬರುವುದಿಲ್ಲ. ನಮ್ಮ ಖಾರ್ಕಾನೆಯಲ್ಲಿ ಶಿಷ್ಟ ವೈಸ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಸಾಮಾನ್ಯ

ಕೆಲಸ ಮಾಡುತ್ತೇನೆ. ಆರೋಪಿತನು ಯಾವ ಸಮಯದಲ್ಲಿ ಯಾವ ಶಿಫ್ಟನಲ್ಲಿ ಕೆಲಸ ಮಾಡಿದ್ದಾನೆ ಎಂದು ಬಯೊಮೆಟ್ರಿಕ್ ಹಾಜರಾತಿಯಲ್ಲಿ ಇರುತ್ತದೆ. ಆರೋಪಿತನು ಕೆಲಸ ನಿರ್ವಹಿಸಿದ ದಿನಗಳ ಯಾದಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಖೊಟ್ಟಿ ಇಂಡೆಂಟಗಳನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ ತನಿಖಾಧಿಕಾರಿಗಳಿಗೆ ಗೊತ್ತು ಎಂದು ನುಡಿಯುತ್ತಾರೆ. ಈ ಪ್ರಕರಣದ ಕುರಿತು ಯಾವುದೇ ಸಾಮಾನ್ಯ ಸಭೆ ಮಾಡಿಲ್ಲ. ಆರೋಪಿತನು ಪಿಯುಸಿ ವರೆಗು ಓದಿರಬಹುದು. ನನ್ನ ಹೆಸರಿನಲ್ಲಿ ಒಟ್ಟು 3 ಸಹಿಗಳು ನಕಲು ಮಾಡಿರುತ್ತಾರೆ ಉಳಿದವುಗಳು ನನಗೆ ಗೊತ್ತಿಲ್ಲ. ದಿಃ 23.01.2013 ರಂದು ಪೋಲಿಸರು ನನ್ನ ಹೇಳಿಕೆ ಪಡೆದಿರತ್ತಾರೆ. ಈ ಪ್ರಕರಣ ದಾಖಲಾಗುವ ಮೊದಲು ಆರೋಪಿ ಕೆಲಸ ಬಿಟ್ಟಿದ್ದಾ ಎಂದರೆ ಸರಿ. ಆರೋಪಿತನು ಕೆಲಸಕ್ಕೆ ಸೇರಿದ್ದು ಮತ್ತು ಬಿಟ್ಟಿದ್ದು ನನಗೆ ಗೊತ್ತಿರುತ್ತದೆ. ಖಾರ್ಕಾನೆಯಲ್ಲಿ ಎಲ್ಲ ಆಗೂ ಹೋಗುವ ವಿಷಯಗಳು ನನ್ನ ಗಮನಕ್ಕೆ ಬರುತ್ತವೆ ಎಂದರೆ ಸರಿ. ಆರೋಪಿತನು ಮಧ್ಯ ಸೇವನೆ ಮಾಡುತ್ತಾನೆ ಎಂದು ನನ್ನ ಮತ್ತು ಆತನ ನಡುವೆ ವೈಶಮ್ಯ ಇತ್ತು ಎಂದರೆ ಸರಿಯಲ್ಲ. ನಾನು ನನ್ನ ಕರ್ತವ್ಯದಲ್ಲಿ ಅಮಾನತು ಗೊಂಡಿದ್ದೇನೆ ಎಂದರೆ ಸರಿಯಲ್ಲ. ಖಾರ್ಕಾನೆಯ ಆವರಣದಲ್ಲಿ ಸಿಸಿ ಕ್ಯಾಮೆರಾ ಇದೆ. 2 ನೇ ಆರೋಪಿತನಿಗೂ ಈ ಪ್ರಕರಣಕ್ಕು ಸಂಬಂದ ಇಲ್ಲ, ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

ಚಾಸಾ-4 ಫ್ರಾಸಾ-6

ದಿಃ 16-06-2020 ರಂದು ಸಾಯಂಕಾಲ 5-30 ಕೆ ಚಾಸಾ 1 ರವರು ಒಂದು ಲಿಖಿತ ದೂರು ನೀಡಿದ್ದು ಸದರಿ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ನೆ ಸಂಖ್ಯೆ 71/2020 ದಾಖಲಿಸಿಕೋಂಡು ಪ್ರ.ವ.ವ. ನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ದಿಃ 17-06-2020 ರಂದು ಚಾಸಾ 2 ಮತ್ತು 3 ರವರ ಸಮಕ್ಷಮ ಗುನ್ಹೆಸ್ಥಳ ಪಂಚನಾಮೆ ಮಾಡಿ ಗುನ್ನೆ ಸ್ಥಳದಿಂದ ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡಿರುತ್ತೇನೆ.

ಅದೇ ದಿನ ಚಾಸಾ 1 ರವರ ಮರುಹೇಳಿಕೆ ಪಡೆದಿರುತ್ತೇನೆ ಮತ್ತು ಚಾಸಾ 4 ರಿಂದ 6 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 19-06-2020 ರಂದು ಆರೋಪಿತರನ್ನು ಇವರಿಗೆ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ 7 ರವರಿಂದ ಚಾಸಾ 1 ರವರ ಗಾಯದ ಪ್ರಮಾಣ ಪತ್ರ ಪಡೆದು ದಿಃ 30-06-2020 ರಂದು 5 ಜನ ಆರೋಪಿತರ ವಿರುದ್ದ ಅಂತಿಮದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.